## ಬಸವೇಶ್ವರ ಆಸ್ಪತ್ರೆಯಲ್ಲಿ ಕೊರೊನಾ ವಿಶೇಷ ವಾರ್ಡ್

ಚಿತ್ರದುರ್ಗ ಮಾ. 14 - ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ಕೊರೊನಾ ವೈರಾಣು ಶಂಕಿತರು/ ಬಾದಿತರಿಗೆ ಚಿಕಿತ್ಸೆಯನ್ನು ಒದಗಿಸಲು 14 ಹಾಸಿಗೆಗಳುಳ್ಳ ಪ್ರತ್ಯೇಕ ವಿಶೇಷ ವಾರ್ಡನ್ನು ತರೆಯಲಾಗಿದೆ ಎಂದು ಎಸ್.ಜೆ.ಎಂ. ವಿದ್ಯಾಪೀಠದ ಅಧ್ಯಕ್ಷರಾದ ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

ಕೊರೊನಾ ವೈರಾಣು ರೋಗದ ಸಂಶಯ ಬಂದಲ್ಲಿ ಅಂತಹವರಿಗೆ ಪ್ರತ್ಯೇಕ ಚಿಕಿತ್ಸೆ ನೀಡಲಾಗುವುದು. ಸಾರ್ವಜನಿಕರು ಮಹಾವಿದ್ಯಾಲಯದ ಡೀನ್ ಆದ ಡಾ|| ಪ್ರಶಾಂತ್ - 9845263002, ವೈದ್ಯಕೀಯ ಅಧೀಕ್ಷಕರಾದ ಡಾ|| ಪಾಲಾಕ್ಷಯ್ಯ ಎಲ್. - 9008861111, ವೈದ್ಯರಾದ ಡಾ|| ರಶ್ಮಿ - 9972084515 ಮತ್ತು ಡಾ|| ಸುಧಾ - 8073326795 ಅವರುಗಳನ್ನು ಸಂಪರ್ಕಿಬಹುದೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

---

ಬಸವೇಶ್ವರ ಆಸ್ಪತ್ರೆ ಸ್ಪಷ್ಟನೆ

ಚಿತ್ರದುರ್ಗ ಮಾ-13 : ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ಆಗಲಿ, ವಿದ್ಯಾಸಂಸ್ಥೆಯಲ್ಲಿ ಆಗಲಿ ಇದುವರೆಗೂ ಯಾವುದೇ ಕೊರೊನಾ ವೈರಸ್ ಶಂಕಿತ ರೋಗಿಗಳು ದಾಖಲಾಗಿಲ್ಲ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಸುಳ್ಳು ಸುದ್ದಿಯಾಗಿರುತ್ತದೆ. ಸಾರ್ವಜನಿಕರು ಈ ರೀತಿಯ ಯಾವುದೇ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದಾಗಿ ಮತ್ತು ವೈರಸ್ ಜ್ವರ ಬರದಂತೆ ತಡೆಯುವ ಕಾರ್ಯಕ್ಕೆ ಸಾರ್ವಜನಿಕರು ಕೈಜೋಡಿಸಬೇಕೆಂದು ಬಸವೇಶ್ವರ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ|| ಪಾಲಾಕ್ಷಯ್ಯ ಮತ್ತು ಮಹಾವಿದ್ಯಾಲಯದ ಡೀನ್ ಡಾ|| ಪ್ರಶಾಂತ್ ಸ್ಪಷ್ಟನೆ ನೀಡಿರುತ್ತಾರೆ.